**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರಃ 463/2021
ಪಿ.ಡಬ್ಲ್ಯೂ : 1

ದಿನಾಂಕಃ 05-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ ಎಸ್ ಕೆ ಎಸ್. ವಕೀಲರಿಂದಃ

1. ನನ್ನ ತಾಯಿ ಮೀನಾಕ್ಷಿ ಬಾಯಿಯವರು ಮೃತ ಪಟ್ಟಿದ್ದು ದಿನಾಂಕ 11-08-2020 ರಂದು. ನನ್ನ ತಾಯಿಗೆ 6 ಜನ ಮಕ್ಕಳು. ಅವರೆಂದರೆ ನಾನು , ಪ್ರತಿವಾದಿ 1 ರಿಂದ 4 ಹಾಗೂ ಶಂಕರನಾಯಕ್. ಶಂಕರನಾಯಕ್ ಮೃತರಾಗಿ 10 ವರ್ಷಗಳಾಗಿರಬಹುದು, ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿಗೆ ವಿದ್ಯಾ ಹಾಗೂ ಕೃಷ್ಣ ಪ್ರಸಾದ್ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ವಿದ್ಯಾರವರಿಗೆ ವರ್ಷ ಎಂಬ ಮಗಳು ಎಂದರೆ ಸರಿ. 2 ನೇ ಪ್ರತಿವಾದಿಗೆ ನಾಗಾರತ್ನರವರಿಗೆ ಪವನ್ ಕುಮಾರ್ ಎಂಬ ಮಗ ಇದ್ದಾನೆ ಎಂದರೆ ಸರಿ. 3 ನೇ ಪ್ರತಿವಾದಿಗೆ ಹೇಮಲತಾರವರಿಗೆ ಮೇಘ ಹಾಗೂ ಶ್ವೇತಾ ಎಂಬ ಇಬ್ಬರು ಹೆಣ್ಣು ಮಕ್ಕಳು. ಮೇಘರವರಿಗೆ ಒಂದು ಹೆಣ್ಣು ಹಾಗೂ ಒಂದು ಗಂಡು ಮಗು ಇದ್ದು ಅವರ ಹೆಸರು ಗೊತ್ತಿರುವುದಿಲ್ಲ. ಶ್ವೇತಾರವರಿಗೆ ಒಂದು ಗಂಡು ಮಗು ಇದ್ದು, ಆ ಮಗುವಿನ ಹೆಸರು ಗೊತ್ತಿರುವುದಿಲ್ಲ.

2. ನನಗೆ ಸ್ವಾತಿ ಎಂಬ ಒಬ್ಬ ಮಗಳು ಇರುತ್ತಾಳೆ. ಈ ಮೇಲೆ ಹೇಳಿದ 16 ಜನ ಪ್ರತಿವಾದಿಗಳನ್ನು ಸೇರಿ ನನ್ನ ತಾಯಿ ತೀರಿಹೋಗುವಾಗ ಹುಟ್ಟಿದ್ದರು ಎಂದರೆ ಸರಿ. ನನ್ನ ತಾಯಿ ಮೃತಪಟ್ಟಾಗ ನಮ್ಮ ಕುಟುಂಬದಲ್ಲಿ ನನ್ನ ತಾಯಿಯನ್ನು ಸೇರಿಸಿ 17 ಜನ ಸದಸ್ಯರಿದ್ದೇವು ಎಂದರೆ ಸರಿ. ನಾನು ಹಾಜರು ಪಡಿಸಿದ ನಿ.ಪಿ.6 ಅಳಿಯ ಸಂತಾನ ಪದ್ದತಿಯ ಕಾನೂನನ್ನು ಆಚರಿಸಿಕೊಂಡು ಬರುವ ಅವಿಭಕ್ತ ಕುಟುಂಬದಲ್ಲಿ ಆದ ಪಾಲು ಪಟ್ಟಿ ಆಗಿರುತ್ತದೆ. ಈ ಪಾಲು ಪಟ್ಟಿ ಆದಾಗ ನನ್ನ ತಾಯಿ ಹಾಗೂ 6 ಜನ ಮಕ್ಕಳು ಪಕ್ಷಗಾರರಿದ್ದರು.

3. ಪಾಲು ಪಟ್ಟಿ ಆಗುವಾಗ ರೇವತಿಯ ಮಗಳು ವಿದ್ಯಾರವರಿಗೆ 1 ವರ್ಷ ಪ್ರಾಯ. ನಿ.ಪಿ.6 ರಲ್ಲಿ ಸದರಿ ವಿದ್ಯಾಸಹ ಪಾಲುದಾರರಾಗಿರುತ್ತಾರೆ. ಇದು ಅಳಿಯ ಸಂತಾನ ಕುಟುಂಬದ ಪಾಲು ಪಟ್ಟಿ ಆಗಿದ್ದರಿಂದ ನನಗೂ ಸಹ ಅಳಿಯ ಸಂತಾನ ಕಾನೂನು ಅನ್ವಯವಾಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತ ಪಡುವಾಗ ದಾವಾ ಆಸ್ತಿಗಳಲ್ಲಿ ಅವರಿಗೆ 17 ರಲ್ಲಿ 1 ಅಂಶ ಹಕ್ಕು ಇತ್ತು ಎಂದರೆ ಸರಿ. ದಾವಾ ಆಸ್ತಿಗಳು ಎಂದರೆ ನಿ.ಪಿ. 6 ರ ಸಿ ಶೆಡ್ಯೂಲ್ ಆಸ್ತಿಗಳು ಎಂದರೆ ಸರಿ. ನನ್ನ ತಾಯಿ ಮೃತರಾದ ನಂತರ ಅವರ ಹಕ್ಕಿನ ಆಸ್ತಿ ಅವರ ಎಲ್ಲಾ ಮಕ್ಕಳಿಗೆ ಹಾಗೂ ಮೃತ ಮಗನ ಮಕ್ಕಳಿಗೆ ಬರುತ್ತದೆ ಎಂದರೆ ಸರಿ. ಆ ರೀತಿ ಪಾಲಾಗಲು ನನ್ನದು ಯಾವುದೇ ಆಕ್ಷೇಪ ಇರುವುದಿಲ್ಲ.

ಮರು ವಿಚಾರಣೆ - ಇಲ್ಲ.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**